(ಇಂದು ದಿನಾಂಕಃ 06–09–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮಧ್ಯಂತರ ಅರ್ಜಿ ಸಂಖ್ಯೆ 6 & 7 ರ ಆದೇಶದ ಮೇರೆಗೆ ಪಾಟೀಸವಾಲು ಃ ಶ್ರೀ ಆರ ಎಸ ಎಂ ವಕೀಲರಿಂದ ಃ-**

1) ದಾವಾ ಸಲ್ಲಿಸಲು ಮಾಹಿತಿ ನಾನು ವಕೀಲರಿಗೆ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳನ್ನು ತಿಳಿದಿರುತ್ತೇನೆ. ಪ್ರತಿವಾದಿಯ ನನಗೆ ನೇರ ಪರಿಚಯವಿಲ್ಲ ಎಂದರೆ ಸಾಕ್ಷಿಯು ಅವರ ಗಂಡನಿಂದ ಪರಿಚಯವಿರುತ್ತದೆ. ಪ್ರತಿವಾದಿಯ ಗಂಡನು ಸಿವಿಲ್ ಗುತ್ತಿಗೆದಾರರು ಆಗಿದ್ದು ನನ್ನ ತಂದೆಯವರಿಗೆ ಪರಿಚಯವಾಗಿ ನಂತರ ನನಗೆ ಪರಿಚಯವಾಗಿರುತ್ತಾನೆ. ನನ್ನ ತಂದೆಯವರು ಬದುಕಿದ್ದಾರೆ. ನಮ್ಮ ಮನೆತನದ ಹಣಕಾಸಿನ ವ್ಯವಹಾರವು ನನ್ನ ತಂದೆಯವರು ನೋಡುತ್ತಾರೆ ಎಂದರೆ ಸಾಕ್ಷಿಯು ನಾವಿಬ್ಬರೂ ನೋಡಿಕೊಳ್ಳುತ್ತೇವೆ.

2) ನನ್ನ ತಂದೆಯವರಿಗೆ ನಾನು ಮತ್ತು ಇಬ್ಬರು ಹೆಣ್ಣುಮಕ್ಕಳು ಇರುತ್ತೇವೆ. ನಮ್ಮ ಮನೆತನದ 8 ಎಕ್ರೆ ಆಸ್ತಿ ಇರುತ್ತದೆ. ಅದು ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ ಆಸ್ತಿಯು ಸರ್ವೆ ಸಂಖ್ಯೆ 356 ಇದ್ದು ಅದು ನನ್ನ ಹೆಸರಿನಲ್ಲಿ ಇರುತ್ತದೆ. ಉತಾರ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ಆಸ್ತಿಯು ನನ್ನ ತಂದೆಯವರು ನನಗೆ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3) ನಮಗೆ ವಾರ್ಷಿಕವಾಗಿ ಹೊಲದಿಂದ 2-3 ಲಕ್ಷ ರೂಪಾಯಿ ಹಾಗೂ ಅಂಗಡಿಯಿಂದ 2 ಲಕ್ಷ ಆದಾಯ ಬರುತ್ತದೆ. ಪಾನ ಅಂಗಡಿ ನನ್ನ ಹೆಸರಿನಲ್ಲಿರುತ್ತದೆ. ಅದಕ್ಕೆ ಸಂಬಂದಿಸಿದ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನಗೆ ಆದಾಯ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನನಗೆ ಆದಾಯವಿದ್ದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

4) ಪ್ರತಿವಾದಿಯು ಬ್ಯಾಳಾಳ ಗ್ರಾಮದಲ್ಲಿ ಶಿಕ್ಷಕಿಯಾಗಿರುತ್ತಾಳೆ. ಪ್ರತಿವಾದಿಯು ದಾವೆಯ ವ್ಯವಹಾರದ 7-8 ವರ್ಷಗಳ ಪೂರ್ವದಲ್ಲಿ ನನ್ನ ಬಳಿ ಹಣ ಕೇಳುವುದು ಕೊಡುವುದು ಮಾಡುತ್ತಾ ಬಂದಿರುತ್ತಾರೆ. ದಾವೆಯ ವ್ಯವಹಾರದ ಸಂಬಂದ ಪ್ರತಿವಾದಿಯು ನನ್ನ ಬಳಿ ಅವರ ಮಗಳ ವಿವಾಹಕ್ಕೆ ಆದ ಸಾಲದ ಸಂಬಂದ ಹಣವನ್ನು ಕೇಳಿರುತ್ತಾಳೆ. ನಾನು ದಾವಾ ವ್ಯವಹಾರ ನಡೆದಿದೆ ಎಂದು ಹೇಳಿದ ಸಮಯದಲ್ಲಿ ಪ್ರತಿವಾದಿಯ ಗಂಡ ಜೀವಂತವಿರುತ್ತಾರೆ ಎಂದರೆ ಸರಿ.

ಪ್ರತಿವಾದಿಯ ಮನೆತನದ ಹಣಕಾಸಿನ ವ್ಯವಹಾರವು ಅವರ ಗಂಡ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

5) ಪ್ರತಿವಾದಿಯ ಮಗಳ ವಿವಾಹ ದಿನಾಂಕ ಗೊತ್ತಿಲ್ಲ. 3 ಲಕ್ಷ ಸಾಲವನ್ನು 27-12-2021 ರಂದು ಕೇಳಿರುತ್ತಾರೆ. ವ್ಯವಹಾರದ ಸಮಯದಲ್ಲಿ ಪ್ರತಿವಾದಿ ಮತ್ತು ಅವಳ ಗಂಡ ಇದ್ದರು. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಅಂದರೆ ಸರಿಯಲ್ಲ. ವ್ಯವಹಾರ ನಡೆದಿದೆ ಎಂದು ಹೇಳಲಾದ ವ್ಯವಹಾರವು ನನ್ನ ತಂದೆಯ ಗಮನದಲ್ಲಿ ಇರುತ್ತದೆ ಅವರೇ ಹಣ ನೀಡಲು ತಿಳಿಸಿದ್ದು ಅವರ ಉಪಸ್ಥಿತಿಯಲ್ಲಿ ಆಗಿರುತ್ತದೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6) 2021 ರ ಪೂರ್ವದಲ್ಲಿ ನನ್ನ ಹೊಲದ ಹೆಸರು ಕಾಳಿನ ಪೀಕನ ಉತ್ಪನ್ನ ಬಂದಿದ್ದು ಹಾಗೂ ಅಂಗಡಿಯ ಆದಾಯ ಬಂದಿದ್ದು ಅದನ್ನು ನಾನು ಸಂದಾಯ ಮಾಡಿ ಇಟ್ಟಿದ್ದು ಇರುತ್ತದೆ. ಬೆಳೆ ಮಾಡಿದ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಪೀಕ ಬಂದಿರುತ್ತದೆ ಎಂದು ಹೇಳಲಾದ ಸಮಯದ ಉತಾರಗಳನ್ನು ಹಾಜರು ಪಡಿಸಿಲ್ಲ. ಸಾಮಾನ್ಯವಾಗಿ ಪೀಕ ಬಂದ ಸಮಯದಲ್ಲಿ ಉತಾರಗಳಲ್ಲಿ ನಮೂದಾಗುತ್ತದೆ ಎಂದರೆ ಸರಿ. ಪಾನ ಅಂಗಡಿಯ ವ್ಯವಹಾರದಿಂದ ಆದಾಯ ಬಂದಿರುತ್ತದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

7) ನನಗೆ ಉತ್ಪನ್ನವಿಲ್ಲದೇ ಇದ್ದ ಕಾರಣ ಹಣ ನೀಡುವ ಪ್ರಶ್ನೆ ಬರುವುದಿಲ್ಲ ಅಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಮೂದು ಮಾಡಿದ 6 ತಿಂಗಳ ಅವಧಿಯು 27-06-2022 ರಲ್ಲಿ ಮುಗಿದಿರುತ್ತದೆ ಎಂದರೆ ಸರಿ. ಅದೇ ರೀತಿ ಮುಂದುವರೆದ 3-4 ತಿಂಗಳ ಅವಧಿಯು ದಿನಾಂಕ 27-10-2022 ರಂದು ಮುಗಿದಿರುತ್ತದೆ ಎಂದರೆ ಸರಿ. ವಾದ ಪತ್ರದಲ್ಲಿ ಅವಧಿಯು 15-07-2022 ರಂದು ಮುಗಿದಿರುತ್ತದೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಯಾವುದೇ ಹಣ ನೀಡಿಲ್ಲ ಹಾಗೂ ಅದರ ಅವಧಿಯು ಉದ್ಭಯಿಸುವುದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

8) 3 ಲಕ್ಷ ರೂಪಾಯಿ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 25 ಸಾವಿರ ರೂಪಾಯಿಕ್ಕಿಂತ ಮೇಲ್ಪಟ್ಟ ಹಣದ ವ್ಯವಹಾರವನ್ನು ಚೆಕ ಅಥವಾ ಆನಲೈನ ಮೂಲಕ ಮಾಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

9) ನಿಪಿ-1 ವ್ಯವಹಾರವು ಬೆಳಗ್ಗೆ 10-30 ರಿಂದ 11-30 ಗಂಟೆ ಸಮಯದಲ್ಲಿ ನವಲಗುಂದದ ದಸ್ತುಬರಹಗಾರ ಕಚೇರಿಯಲ್ಲಿ ನಡೆದಿರುತ್ತದೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ರ ಮೇಲೆ ನನ್ನ ತಂದೆ ಹಾಗೂ ಪ್ರತಿವಾದಿಯ ಗಂಡನ

ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ಮೇಲೆ ನಂಬಿಕ ಇದ್ದ ಕಾರಣ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ವ್ಯವಹಾರ ನಡೆದಿಲ್ಲ ಆದಕಾರಣ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ-1 ರ ಮೇಲೆ ಪ್ರತಿವಾದಿಯ ಸಹಿ ಇರುವುದಿಲ್ಲ ಅಂದರೆ ಸರಿಯಲ್ಲ.

10) ನಿಪಿ-1 ರ ಸಾಕ್ಷಿದಾರರು ಎಂದು ನಮೂದು ಮಾಡಿದ ಬಿ ಕೆ ಪೂಜಾರ ರವರು ಪ್ರತಿವಾದಿಯ ಪರಿಚಯದವರು ಇರುತ್ತಾರೆ. ನಿಪಿ-1 ರ ಸಹಿಗಳನ್ನು ನಾನೇ ಸೃಷ್ಟಿ ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿದಾರರು ಪ್ರತಿವಾದಿಯ ಪರಿಚಯದವರು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಬಿ ಕೆ ಪೂಜಾರ ರವರ ಸಾಕ್ಷಿ ವಿಚಾರಣೆ ಮಾಡಿರುತ್ತೇನೆ. ಎಸ್ ಸಿ ಗುಳೇದ ನನ್ನ ತಂದೆಯವರು ಅವರ ಸಾಕ್ಷಿ ವಿಚಾರಣೆ ಮಾಡಿಲ್ಲ. ಪ್ರತಿವಾದಿಯ ಗಂಡನ ಸಹಿ ನಿಪಿ-1 ರ ಮೇಲೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯು ಅದನ್ನು ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ನ್ನು ನಾನು ಸ್ವತಃ ಸುಳ್ಳು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

11) ನಿಪಿ-2 ರಲ್ಲಿ ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ ನೋಟಿಸ ನೀಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿ-4 ರ ಮೇಲೆ ಪ್ರತಿವಾದಿಯ ಸಹಿ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ನಮ್ಮ ಊರಿನ ಗುತ್ತಿಗೆ ಕೆಲಸ ಮಾಡಿರುತ್ತಾನೆ. ಸದರಿ ಕಾಮಗಾರಿಯ ಸಮಯದಲ್ಲಿ ನನಗೆ ಹಾಗೂ ಪ್ರತಿವಾದಿಯ ಗಂಡನಿಗೆ ಜಗಳವಾಗಿರುತ್ತದೆ ಅಂದರೆ ಸರಿಯಲ್ಲ. ಸದರಿ ದ್ವೇಷದಿಂದ ಪ್ರತಿವಾದಿಯ ಗಂಡನಿಗೆ ತೊಂದರೆಯಾಗಬೇಕೆಂದು ನಾನು ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ ಸದರಿ ದಾವೆ ಹೂಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**